

ಡಾ.ವಿನೋದ ಛೆಬ್ಬಿ

**ತನ್ನ ನೆಮ್ಮದಿಗಾಗಿ ಸಂಗಾತಿಯನ್ನು ಪುಸಲಾಯಿಸಿ ಬಳಸಿಕೊಳ್ಳುವುದು ಪೊಳ್ಳು ಸ್ವಂತಿಕೆಯ ಲಕ್ಷಣ.**

# 303: ಹೊಸ ದಾರಿ - 43

ಪ್ರತಿಫಲಿತ ಸ್ವಂತಿಕೆಯು ಪ್ರಶಂಸೆಯ ರೂಪದಲ್ಲಿ ಸದಾ ಬರುತ್ತಿದ್ದರೆ ತಾನೇನು ಎಂಬುದು ತನಗೇ ಅರ್ಥವಾಗುವುದಿಲ್ಲ; ಆದರೆ ಜಗಳಗಳು ಸಂಗಾತಿಯ ಬೆಸುಗೆಯಿಂದ ಕಳಚಿಕೊಳ್ಳುತ್ತ ವ್ಯಕ್ತಿ ಪ್ರತ್ಯೇಕತೆಯತ್ತ ತಳ್ಳುತ್ತವೆ ಎಂದು ಹೋದಸಲ ಮಾತಾಡಿಕೊಂಡೆವು.

ಪ್ರಶಂಸೆಯನ್ನು ಕೊಡುಕೊಳ್ಳುವುದೂ ಯಾವುದೇ ಸಂಬಂಧದ ಅವಿಭಾಜ್ಯ ಅಂಗ, ಹಾಗಾಗಿ ಪ್ರತಿಫಲಿತ ಸ್ವಂತಿಕೆ ಕೂಡ ಬಾಂಧವ್ಯಕ್ಕೆ ಮಹತ್ವದ್ದು ಎಂದು ಹೇಳುತ್ತಿದ್ದೆ. ದುರದೃಷ್ಟದಿಂದ ಹೆಚ್ಚಿನ ಸಂಬಂಧಗಳು ಪ್ರಶಂಸೆಯ ಬದಲು ಟೀಕೆಟಿಪ್ಪಣಿಗಳ ಮೇಲೆ ನಿಂತಿರುತ್ತವೆ – ನೀನು ಮಾತಾಡದಿದ್ದರೆ ನಾನೇಕೆ ಮುಗಿಬಿದ್ದು ಮಾತಾಡಿಸಬೇಕು ಎನ್ನುವಂತೆ. ಒಬ್ಬರ ಸಂಪರ್ಕ ಬಯಸಿದರೂ ಇನ್ನೊಬ್ಬರು ಸ್ಪಂದಿಸುವುದಿಲ್ಲ. ಅದಕ್ಕೊಂದು ದೃಷ್ಟಾಂತ: ಭೂಷಣ ಕೆಲಸದ ಭರದಲ್ಲಿ ಇರುವಾಗ ಶಶಿಯ ಕರೆ ಬರುತ್ತದೆ.

ಶಶಿ: ಊಟಕ್ಕೆ ಎಷ್ಟೊತ್ತಿಗೆ ಬರುತ್ತೀಯಾ?

ಭೂಷಣ: (ಅಸಮಾಧಾನದಿಂದ) ಇವೊತ್ತು ಊಟಕ್ಕೆ ಬರುವುದಿಲ್ಲ, ನನಗೋಸ್ಕರ ಕಾಯಬೇಡ ಎಂದು ಮುಂಚೆಯೇ ಹೇಳಿದ್ದೆ!

ಶಶಿ: ಹೌದು, ಆದರೆ ಕೆಲಸ ಬೇಗ ಮುಗಿಸಿಬಿಡ್ತೀಯಾ ಅಂದುಕೊಂಡು ಸ್ಪೆಶಲ್ ಅಡುಗೆ ಮಾಡಿದ್ದೇನೆ.

ಭೂಷಣ: ನೀನು ಅಂದುಕೊಂಡಿದ್ದಕ್ಕೆ ನಾನು ಜವಾಬ್ದಾರನಾ? ನಿನ್ನ ಕಾಲ್‌ನಿಂದ ನನ್ನ ಕೆಲಸ ಹಾಳಾಗುತ್ತಿದೆ!

ಶಶಿ ಉತ್ತರ ಅರಗಿಸಿಕೊಳ್ಳುವಾಗಲೇ ಸಂಭಾಷಣೆ ನಿಂತುಹೋಗುತ್ತದೆ. ಅತ್ತ ಭೂಷಣ ಶಶಿಯನ್ನು ಶಪಿಸುತ್ತ ಕೆಲಸಕ್ಕೆ ಮನಸ್ಸು ಕೊಡಲು ಒದ್ದಾಡುತ್ತಾನೆ. ಇತ್ತ ಶಶಿಗೆ ಒಬ್ಬಳೇ ಉಣ್ಣುವುದಕ್ಕೆ ಮನಸ್ಸು ಬರುವುದಿಲ್ಲ. ಒಟ್ಟಾರೆ ಇಬ್ಬರ ಮನಗಳೂ ಕಹಿಯಾಗಿವೆ. ಇಲ್ಲೇನು ನಡೆಯಿತು?

ದಿನಾಲೂ ಜೊತೆಗೂಡಿ ಊಟ ಮಾಡುತ್ತಿರುವ ಶಶಿಗೆ ಭೂಷಣನಿಲ್ಲದೆ ಭಣಭಣ ಎನಿಸಿದ್ದೂ ಸಹಜ. ಶಶಿಯ ಕರೆಯು ಭೂಷಣನ ಕೆಲಸಕ್ಕೆ ಭಂಗತಂದಿದ್ದೂ ಸಹಜ. ಇಲ್ಲಿ ಒಬ್ಬರು ಒಟ್ಟಿಗಿರುವುದಕ್ಕೆ ಕರೆಕೊಟ್ಟರೆ ಇನ್ನೊಬ್ಬರು ಪ್ರತ್ಯೇಕತೆಗೆ ಕರೆಕೊಡುತ್ತಿದ್ದಾರೆ. ಇದರಲ್ಲಿ ಯಾರದು ಸರಿ, ಯಾರದು ತಪ್ಪು ಎನ್ನುವ ಪ್ರಶ್ನೆಯಿಲ್ಲ – ಇಬ್ಬರೂ ತಮ್ಮ ನೆಮ್ಮದಿಯನ್ನು ಹುಡುಕಿಕೊಳ್ಳುತ್ತಿದ್ದಾರೆ. ಶಶಿಯು ಭೂಷಣ ತನ್ನೊಂದಿಗೆ ಇಲ್ಲದಿದ್ದರೆ ರುಚಿಯೂಟವನ್ನು ಸವಿಯಲು ಆಗುವುದಿಲ್ಲ ಎಂದುಕೊಂಡಿದ್ದಾಳೆ. ಹಾಗಾದರೆ ಆಕೆಗೂ ಊಟಕ್ಕೂ ಇರುವ ಬಾಂಧವ್ಯವೇನು? ಈ ಪ್ರಶ್ನೆಯೇ ವಿಚಿತ್ರವಾಗಿದೆ ಎಂದು ನಿಮಗೆ ಅನ್ನಿಸಬಹುದು. ಇದನ್ನು ಸ್ಪಷ್ಟಮಾಡಿಕೊಳ್ಳಲು ಹೀಗೆ ಯೋಚಿಸಿ: ನಿಮಗೆ ಯಾವ ತಿಂಡಿ ಇಷ್ಟವೆಂದು ಎಂದು ಕೇಳಿದರೆ ಮಸಾಲೆ ದೋಸೆ ಎನ್ನುತ್ತೀರಿ ಎಂದುಕೊಳ್ಳಿ. ಹಾಗೆಂದು ದೋಸೆಯ ಹೆಸರು ಹೇಳಿ ಸುಮ್ಮನಿರುವುದಿಲ್ಲ. ಇಂಥಾ ಹೋಟೆಲ್ ಎಂದು ಹೆಸರಿಸಿ, ಅದರಲ್ಲಿ ಗರಿಗರಿಯಾಗಿ ಮಾಡಿದ ದೋಸೆಯ ಮೇಲೆ ಬೆಣ್ಣೆ ಮುದ್ದೆಯು ಕರಗುವುದನ್ನು ಅರಳುಗಣ್ಣುಗಳಿಂದ ನೋಡುತ್ತ, ಬಾಯಲ್ಲಿ ನೀರೂರಿ, ಒಂದೊಂದೇ ತುಂಡನ್ನು ಮುರಿದು ಜಗಿಯುತ್ತ ಅರ್ಥವಾಯಿತಲ್ಲವೆ? ಇಲ್ಲಿ ನಿಮಗೂ ದೋಸೆಗೂ ಇರುವ ಬಾಂಧವ್ಯವನ್ನು ವರ್ಣಿಸುತ್ತಿದ್ದೀರಿ. ಇಂಥದ್ದೇ ಒಳಾನುಭವ ಶಶಿಗೂ ಬಂದಿರಲೇಬೇಕು – ಯಾಕೆಂದರೆ ಭೂಷಣನನ್ನು ಕಟ್ಟಿಕೊಳ್ಳುವುದಕ್ಕಿಂತ ಬಹಳ ಮುಂಚೆಯಿಂದಲೇ ಊಟ ಸವಿಯುತ್ತಿದ್ದಾಳೆ. ಇದು ಅವಳ ಸ್ವಂತಿಕೆ. ಅವನ ಗೈರುಹಾಜರಿಯಿಂದ ತನಗೂ ಊಟಕ್ಕೂ ಇರುವ ಸಂಬಂಧ ಕೆಡುತ್ತದೆ ಎಂದುಕೊಳ್ಳುವುದು ಆಕೆಯ ಸ್ವಂತಿಕೆ ಅಷ್ಟು ಗಟ್ಟಿಯಾಗಿಲ್ಲ ಎಂದು ತೋರಿಸುತ್ತದೆ. ಅತ್ತ ಭೂಷಣ ಕೂಡ ತನಗೂ ಕೆಲಸಕ್ಕೂ ಇರುವ ಬಾಂಧವ್ಯವನ್ನು ಮರೆತು, ಶಶಿಯ ಮಧ್ಯಪ್ರವೇಶದಿಂದ ಕೆಲಸ ಕೆಡುತ್ತಿದೆ ಎಂದುಕೊಳ್ಳುವುದು ಅವನ ಅಷ್ಟೇನೂ ಗಟ್ಟಿಯಾಗಿರದ ಸ್ವಂತಿಕೆಯ ಲಕ್ಷಣ – ಇಲ್ಲದಿದ್ದರೆ ಕರೆ ಮುಗಿದ ತಕ್ಷಣ ಕೆಲಸದೊಳಗೆ ಮುಳುಗುತ್ತಿದ್ದ. ಹೀಗೆ ಇಬ್ಬರೂ ತಮ್ಮ ಇರುವಿಕೆಯನ್ನು ತಮ್ಮ ನಡುವಿನ ಕ್ರಿಯೆ–ಪ್ರತಿಕ್ರಿಯೆಗಳ ಮೇಲೆ ಆಧರಿಸಿ ನಿಲ್ಲಿಸುತ್ತಿದ್ದಾರೆಯೇ ವಿನಾ ತಮ್ಮೊಳಗಿನ ಗಟ್ಟಿಯಾದ ಸ್ವಂತಿಕೆಯ ಮೂಲಕ ನಿರ್ವಹಿಸುತ್ತಿಲ್ಲ.

ಹೀಗೆ ಗಟ್ಟಿ ಸ್ವಂತಿಕೆಯಿಲ್ಲದವರು ಸಂಗಾತಿಯೊಂದಿಗೆ ಬೆಸೆದುಕೊಳ್ಳುತ್ತ ಅವರ ಶಕ್ತಿಸಾಮರ್ಥ್ಯವನ್ನು ಸೆಳೆಯುವುದು, ಹಾಗೂ ಅದರ ಮೇಲೆ ಸಂಬಂಧವನ್ನು ನೆಲೆಗೊಳಿಸುವುದು ಸಾರ್ವತ್ರಿಕವಾಗಿ ಕಂಡುಬರುತ್ತದೆ. ಇದು ಸಹಜವಾಗಿದ್ದರೂ (ಯಾಕೆ? ಇದು ತಾಯಿ–ಮಗುವಿನ ಬಾಂಧವ್ಯದ ಪಳೆಯುಳಿಕೆ) ಪ್ರಬುದ್ಧ ಸಂಬಂಧಗಳಲ್ಲಿ 'ಕಪಟತೆ' (inauthentic) ಎನಿಸಿಕೊಳ್ಳುತ್ತದೆ. ಅದು ಹೇಗೆ? ಭೂಷಣ ಊಟಕ್ಕೆ ಬರದಿರುವ ದಿನದಂದೇ ಶಶಿ ಅವನಿಷ್ಟದ ಅಡುಗೆ ಮಾಡಿದುದರ ಇಂಗಿತವೇನು? ಅವನು ತನ್ನ ಕೆಲಸಕ್ಕಿಂತ ಅವಳಿಗೇ ಮಹತ್ವ ಕೊಡಬೇಕು! 'ಬೇಗ ಮುಗಿಸಿಬಿಡ್ತೀಯಾ' ಎನ್ನುವುದರಲ್ಲಿ ಪುಸಲಾಟ ಇದೆಯೇ ವಿನಾ ಮೆಚ್ಚುಗೆಯಿಲ್ಲ. ಇದು ಆಕೆಯ ಸ್ವಂತಿಕೆಯ ಕೊರತೆಯನ್ನು ಭರ್ತಿಮಾಡಿಕೊಳ್ಳುವ ಪ್ರಯತ್ನವಷ್ಟೆ. ಹೀಗೆ ಧೂರ್ತತನದಿಂದ ಹತ್ತಿರ ಸೆಳೆಯುವುದು, ಮುಖಸ್ತುತಿ ಮಾಡುವುದು (ಸ್ವಾರ್ಥಸಾಧನೆ), ಅಭಿಪ್ರಾಯ ಕೇಳದೆ ಕೇವಲ ಮೆಚ್ಚುಗೆ ವ್ಯಕ್ತಪಡಿಸಲು ಒತ್ತಾಯಿಸುವುದು (ಆತ್ಮವಿಶ್ವಾಸದ ಕೊರತೆ), ಸಂಗಾತಿಯಿಂದ ಮರೆಮಾಚುವುದು (ಟೀಕೆಯ ಭಯ), ತನ್ನ ಪ್ರಾಮಾಣಿಕ ಅಭಿಪ್ರಾಯವನ್ನು ಸ್ಪಷ್ಟಪಡಿಸುವುದಕ್ಕೆ ಹಿಂದೆಗೆಯುವುದು (ತಿರಸ್ಕೃತಗೊಳ್ಳುವ ಅಳುಕು), ಹೊಣೆ ತಪ್ಪಿಸಿಕೊಳ್ಳುವ ಹವ್ಯಾಸ (ಬೇಜವಾಬ್ದಾರಿತನ) ಕೀಳು ಜೋಕುಗಳ ಮೂಲಕ ಹರಿಹಾಯ್ದು ತಮಾಷೆಯೆಂದು ನುಣುಚಿಕೊಳ್ಳುವುದು (ಸಂಬಂಧ ದ್ರೋಹ, ಆತ್ಮರತಿ) ಮುಂತಾದ ವರ್ತನೆಗಳು ಪೊಳ್ಳು ಸ್ವಂತಿಕೆಯ ರೂಪಗಳು. ಪರಿಣಾಮವಾಗಿ ಒಂದು ರೀತಿಯ ಹೊಂದಾಣಿಕೆಯ ದಾಂಪತ್ಯ ನಡೆಯುತ್ತದೆಯಷ್ಟೆ. ತೃಪ್ತಿಕರ ಬಾಂಧವ್ಯಕ್ಕಾಗಿ ಪ್ರತಿಫಲಿತ ಸ್ವಂತಿಕೆಯನ್ನು ಮೀರಿ ಬೆಳೆಯಬೇಕಾಗುತ್ತದೆ.

ಇನ್ನು, ಗಟ್ಟಿ ಸ್ವಂತಿಕೆ ಹೇಗಿರುತ್ತದೆ? ಸಂಗಾತಿಯನ್ನು ಮೆಚ್ಚಿಸಲೆಂದಾಗಲೀ, ಸತ್ಯದ ಹೆಸರಲ್ಲಿ ಟೀಕಿಸಲೆಂದಾಗಲೀ ಇರದೆ ತಾನು ಹೇಗಿರುವೆನೋ ಹಾಗೆ ಇರುತ್ತದೆ. ಒಳಗೊಂದು ಹೊರಗೊಂದು ಇರುವುದಿಲ್ಲ. ಇದಕ್ಕೊಂದು ದೃಷ್ಟಾಂತ: ಒಂದು ಮದುವೆಯಲ್ಲಿ ಎಲ್ಲರೂ ನಾನಾ ರೀತಿ ಝಗಝಗಿಸುವ ಉಡುಪು ಆಭರಣ ಧರಿಸಿ ಮೆರೆಯುತ್ತಿದ್ದುದನ್ನು ನೋಡುತ್ತಿದ್ದೆ. ಒಬ್ಬಾಕೆ ಮಾತ್ರ ಮೂಲೆಯಲ್ಲಿ ಕುಳಿತು ಸೂಪ್ ಸವಿಯುತ್ತ ಎಲ್ಲರನ್ನೂ ಗಮನಿಸುತ್ತಿದ್ದಳು. ಅವಳ ಉಡುಪು ಸರಳವಾಗಿತ್ತು. ಸರವೊಂದನ್ನು ಬಿಟ್ಟರೆ ಬೇರಾವ ಚಿನ್ನವೂ ಇರಲಿಲ್ಲ. ಕುತೂಹಲದಿಂದ ಅವಳನ್ನು ಮಾತಿಗೆಳೆದೆ. ಅಮೆರಿಕೆಯಲ್ಲಿ ಪಿ.ಎಚ್.ಡಿ. ಮಾಡಿ, ಐದು ವರ್ಷ ವಿಶ್ವವಿದ್ಯಾಲಯದಲ್ಲಿ ಉದ್ಯೋಗಸ್ಥಳಾಗಿ ಸಾಕಾಗಿ ಭಾರತದ ಮಣ್ಣಲ್ಲಿ ನೆಲೆಸಲು ಬಂದಿದ್ದಳು. ಅವಳ ಉಡುಪಿನ ಸರಳತೆಯನ್ನು ಮೆಚ್ಚಿಕೊಂಡಾಗ ಅವಳೇನು ಹೇಳಿದಳು? 'ಹಾಗೇನಿಲ್ಲ, ನನಗೂ ರೇಶ್ಮೆಸೀರೆ ಆಭರಣ ಇಷ್ಟ. ಆದರೆ ಈ ಬೇಸಿಗೆಯಲ್ಲಿ ಮಾತ್ರ ಬೇಡ.' ಸುತ್ತಲಿದ್ದವರನ್ನು ಗಮನಿಸಿದೆ: ಅಲಂಕಾರದ ಭಾರ ಹೊತ್ತವರೆಲ್ಲ ಬೆವರು ಸುರಿಸುತ್ತಿದ್ದರೂ ನಲಿಯುವಂತೆ ತೋರಿಸಿಕೊಳ್ಳುತ್ತಿದ್ದರು.

ಪ್ರಯೋಗ **38:** ನಿಮಗಿಷ್ಟವಾದರೂ ಸಂಗಾತಿಗೋಸ್ಕರ ಬಿಟ್ಟುಕೊಟ್ಟ ನಿಮ್ಮ ಬಯಕೆಗಳನ್ನು ಪಟ್ಟಿಮಾಡಿ (ಉದಾ. ನಿಮ್ಮ ಕೂದಲಿನ ಉದ್ದವನ್ನು ಅವರ ಬಯಕೆಗೆ ತಕ್ಕಂತೆ ನಿರ್ಧರಿಸುವುದು) ಅವುಗಳನ್ನು ಸಂಗಾತಿಯೊಡನೆ ಹಂಚಿಕೊಳ್ಳುತ್ತ ಪ್ರತಿಕ್ರಿಯೆಯನ್ನು ಗಮನಿಸಿ. ಅವರು ನಿಮ್ಮನ್ನು ಮೆಚ್ಚಿಕೊಂಡಿದ್ದಾರೆಯೆ? ಅಥವಾ ಕಡೆಗಣಿಸುತ್ತಿದ್ದಾರೆಯೆ? ಇನ್ನುಮೇಲೆ ನೀವೇನು ನಿರ್ಧರಿಸುತ್ತೀರಿ?

ವಾರದ ಪ್ರಶ್ನೆಗಳು: ಸಂಗಾತಿಯನ್ನು ಮೆಚ್ಚಿಸಲು ಏನೇನೋ ತಂತ್ರಹೂಡಿ ಆಗದಿದ್ದಾಗ ಏನು ಅಂದುಕೊಳ್ಳುತ್ತೀರಿ? ಸಂಗಾತಿ ನಿಮ್ಮನ್ನು ಇಷ್ಟಪಡುತ್ತಿಲ್ಲವೆಂದೋ? ಅವರನ್ನು ಮೆಚ್ಚಿಸುವ ಸಾಮರ್ಥ್ಯ ಕುಗ್ಗುತ್ತಿದೆಯೆಂದೋ? ಆಗ ನಿಮ್ಮಲ್ಲಿ ಯಾವ ಭಾವಗಳು ಮೂಡುತ್ತವೆ? ಕೀಳರಿಮೆ, ಸೋಲು, ನಿರಾಶೆ? ಕಳೆದುಕೊಳ್ಳುವ ಭಯ? ಏನಿದ್ದರೂ ನನ್ನೊಡನೆ ಹಂಚಿಕೊಳ್ಳಬಹುದು.

ಸಂಪರ್ಕಕ್ಕೆ: 8494933888; Email: vinod.chebbi@gmail.com